# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ/2022-23

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 19.07.2022

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 11.07.2022 ರಂದು ಜರುಗಿದ ತುರ್ತು ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 19.07.2022

******

ದಿನಾಂಕ 11.07.2022 ರಂದು ಮಧ್ಯಾಹ್ನ 3.30 ಗಂಟೆಗೆ ಜರುಗಿದ ತುರ್ತು ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ತುರ್ತು/ವಿಶೇಷ(Special)/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 12-07-2022

**ದಿನಾಂಕ 11-07-2022 ರಂದು ಮಧ್ಯಾಹ್ನ 3.30 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.**

**ಹಾಜರಾದ ಸದಸ್ಯರು:**

| | | | |
|---|---|---|---|
| 1. | ಡಾ. ಸಿಂಥಿಯಾ ಮಿನೇಜಸ್<br>ಕುಲಪತಿಗಳು (ಪ್ರಭಾರ) | - | ಸಭಾಧ್ಯಕ್ಷರು |
| 2. | ಡಾ. ಸುಧಾಕರ್. ಎಚ್ | - | ಸದಸ್ಯರು |
| 3. | ಶ್ರೀ ಎಂ. ಉದಯಕುಮಾರ್ | - | ಸದಸ್ಯರು |
| 4. | ಶ್ರೀ ಕುಮಾರ ಟಿ, | - | ಸದಸ್ಯರು |
| 5. | ಡಾ. ಧನಂಜಯ ಬಿ.ಆರ್ | - | ಸದಸ್ಯರು |
| 6. | ಡಾ. ಎಂ. ಶೈಲಜ | - | ಸದಸ್ಯರು |
| 7. | ಡಾ. ಸುಧೀರ್ ಪೈ. ಕೆ.ಎಲ್ | - | ಸದಸ್ಯರು |
| 8. | ಡಾ. ಗೋವಿಂದರಾಜು | - | ಸದಸ್ಯರು |
| 9. | ಶ್ರೀ ಪ್ರೇಮ್ ಸೋಹನ್‌ಲಾಲ್ | - | ಸದಸ್ಯರು |
| 10. | ಪ್ರೊ. ಟಿ.ವಿ. ರಾಜು | - | ಸದಸ್ಯರು |
| 11. | ಡಾ. ಕೆ.ಎಂ. ಕುಮಾರಸ್ವಾಮಿ<br>ಉಪ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ<br>(ನಿರ್ದೇಶಕರ ಪರವಾಗಿ) | - | ಸದಸ್ಯರು |
| 12. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 13. | ಪ್ರೊ. ಎಂ ಕೊಟ್ರೇಶ್,<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

ಕುಲಪತಿಗಳು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

Cynthia Menezes

ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳುವ ಮೊದಲು ಡಾ. ಹೆಚ್. ಸುಧಾಕರ್ ರವರು ಮಾತನಾಡಿ ಸಿಂಡಿಕೇಟ್ ಕಾರ್ಯಸೂಚಿಯನ್ನು ಸಭಾ ಸೂಚನಾ ಪತ್ರದೊಂದಿಗೆ ಕಳುಹಿಸಿಕೊಟ್ಟಲ್ಲಿ ಸದಸ್ಯರುಗಳು ಸಭೆಯಲ್ಲಿ ವಿಷಯಗಳ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡಲು ಅನುಕೂಲವಾಗುತ್ತದೆ. ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳ ಬಗ್ಗೆ ಗೌಪ್ಯತೆಯನ್ನು ಕಾಪಾಡಿಕೊಳ್ಳಬೇಕು. ಕೆಲವು ಸದಸ್ಯರುಗಳು ಸಭೆಯ ಮಧ್ಯಭಾಗದಲ್ಲೇ ಹೊರಗಡೆ ಹೋಗಿ ಸಭೆಯಲ್ಲಿ ನಡೆಯುವ ಚರ್ಚೆಯ ಬಗ್ಗೆ ಮಾಹಿತಿ ನೀಡದ ಹಾಗೆ ಕ್ರಮ ಕೈಗೊಳ್ಳಬೇಕು, ಕಾರ್ಯಸೂಚಿಯ ಮೇಲೆ ನಡೆಯುವ ಚರ್ಚೆಯಂತೆ, ಮುಂದೆ ಯಾವುದೇ ಕಾನೂನಾತ್ಮಕ ತೊಡಕುಗಳಾಗದಂತೆ ಸೂಕ್ತ ನಿರ್ಣಯ ಕೈಗೊಳ್ಳಬೇಕು. ಬೆಂಗಳೂರು ವಿಶ್ವವಿದ್ಯಾಲಯವು ಹಲವಾರು ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಕಾರಣಕರ್ತವಾಗಿದ್ದರೂ ಕೂಡ ಇನ್ನೂ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಕಾರ್ಯಗಳು ನಿಗದಿತ ಅವಧಿಯೊಳಗೆ ಸರಿಯಾಗಿ ನಡೆಯುತ್ತಿಲ್ಲ. ವಿದ್ಯಾರ್ಥಿಗಳ ಅಹವಾಲುಗಳನ್ನು ನಿಗಧಿತ ಅವಧಿಯೊಳಗೆ ಬಗೆಹರಿಸಲು ಕ್ರಮ ಕೈಗೊಂಡಿಲ್ಲ, ಸಾಕಷ್ಟು ವಿದ್ಯಾರ್ಥಿಗಳು ಪರೀಕ್ಷಾ ಭವನಕ್ಕೆ ಪದೇ ಪದೇ ಭೇಟಿ ನೀಡುವ ಪರಿಸ್ಥಿತಿ ಇದೆ. ಈ ವಿಷಯವಾಗಿ ವಿಶ್ವವಿದ್ಯಾಲಯವು ಮಾಧ್ಯಮಗಳಲ್ಲಿ ಟೀಕೆಗೆ ಗುರಿಯಾಗುತ್ತಿದೆ ಎಂದು ತಿಳಿಸಿ ವಿದ್ಯಾರ್ಥಿಗಳಿಗೆ ನಿಗಧಿತ ಅವಧಿಯೊಳಗೆ ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರ ನೀಡಲು ಆಧ್ಯತೆ ನೀಡಬೇಕೆಂದು ತಿಳಿಸಿದರು. ಅವರು ಮುಂದುವರೆದು ವಿಳಂಬ ಮಾಡುವ ಸಿಬ್ಬಂದಿಗಳ ಮೇಲೆ ಕ್ರಮ ತೆಗೆದುಕೊಂಡಿರುವ ಬಗ್ಗೆ ವಿದ್ಯಾರ್ಥಿಗಳ ಎಷ್ಟು ಅರ್ಜಿಗಳನ್ನು ವಿಲೇ ಮಾಡಲಾಗಿದೆ ಹಾಗೂ ವಿಲೇ ಆಗದೇ ಉಳಿದಿರುವ ಅರ್ಜಿಗಳ ವಿವರಗಳನ್ನು ಸಲ್ಲಿಸಬೇಕೆಂದು ಕೋರಿದರು. ಅವರು ಮುಂದುವರೆದು, ಅಂಚೆ ತೆರಪು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯದ ಪರೀಕ್ಷೆಯ ಪ್ರಶ್ನೆಪತ್ರಿಕೆ ನಿಗದಿಪಡಿಸುವ ಕುರಿತು ಆಗಿರುವ ಲೋಪದ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕು, ಪರೀಕ್ಷಾ ವಿಭಾಗದ ಅಂಕಪಟ್ಟಿ ಯೂನಿಟ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ 03 ವರ್ಷ ಪೂರೈಸಿರುವ ತಾಂತ್ರಿಕ ಸಿಬ್ಬಂದಿಯನ್ನು ವರ್ಗಾವಣೆ ಮಾಡಬೇಕೆಂದರು.

ಶ್ರೀ ಉದಯಕುಮಾರ್ ಎಂ ಅವರು ಮಾತನಾಡಿ ಖಾಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣಪತ್ರಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಅಂತಿಮಗೊಳಿಸಿ ನಂತರ ಸಿಂಡಿಕೇಟ್ ಅನುಮೋದನೆ ಮಾಡಿದ್ದರೂ ಸಹ ಅದನ್ನು ಅನುಷ್ಠಾನಗೊಳಿಸಿ ಕಾರ್ಯಾದೇಶ ನೀಡದೇ ಸಿಂಡಿಕೇಟ್ ಗಮನಕ್ಕೆ ಬಾರದೇ ಟೆಂಡರ್ ಅನ್ನು ರದ್ದುಗೊಳಿಸಲಾಗಿದೆ. ಈ ಬಗ್ಗೆ ಸ್ಪಷ್ಟೀಕರಣ ಬೇಕೆಂದು ತಿಳಿಸಿದರು. 2021-22ನೇ ಸಾಲಿನ 6ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಉತ್ತೀರ್ಣ ಎಂದು ಅಂಕಪಟ್ಟಿ ನೀಡಿ ನಂತರ ಅವರ ಸ್ನಾತಕೋತ್ತರ ಪ್ರವೇಶಾತಿ ಅನುಮೋದನೆ ಸಂದರ್ಭದಲ್ಲಿ ಅನುತ್ತೀರ್ಣ ಎಂದು ತಿಳಿಸಲಾಗಿದೆ, ಈ ವ್ಯತ್ಯಯದ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ಬೇಕೆಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್‌ಲಾಲ್ ಅವರು ಮಾತನಾಡಿ ಅಂಕಪಟ್ಟಿ ಸಮಸ್ಯೆಯನ್ನು ಸರಿಪಡಿಸಬೇಕೆಂದು ಮನವಿ ಸಲ್ಲಿಸಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರಗಳನ್ನು ನೀಡಬೇಕು. ವಿದ್ಯಾರ್ಥಿಗಳು ಮೂರರಿಂದ ನಾಲ್ಕು ತಿಂಗಳುಗಳು ಪರೀಕ್ಷಾ ವಿಭಾಗಕ್ಕೆ ಅಲೆದರೂ ಅವರ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಪರೀಕ್ಷಾ ವಿಭಾಗದಲ್ಲಿ ಕುಂದು-ಕೊರತೆಗಳ ಕೋಶ ಅಸ್ತಿತ್ವದಲ್ಲಿರುವುದಿಲ್ಲ. ಒಂದು ಸಹಾಯವಾಣಿಯನ್ನು ಸ್ಥಾಪಿಸಿರುವುದಿಲ್ಲ. ಕಳೆದ ತಿಂಗಳು ಸಿಂಡಿಕೇಟ್ ಸಭೆ ನಡೆದ ದಿನದಂದೇ ಅಂದು ನಡೆಯಬೇಕಿದ್ದ ಪರೀಕ್ಷೆಯನ್ನು ಮುಂದೂಡಲಾಗಿದೆ. ಘಟನೆ ನಡೆದ 24 ಗಂಟೆಯೊಳಗೆ

ಸಿಂಡಿಕೇಟ್ ಸದಸ್ಯರುಗಳು ಪತ್ರ ಬರೆಯಲಾಗಿದ್ದರೂ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡಿಲ್ಲ. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಕೇಳುವವರಿಲ್ಲ. ಅವುಗಳ ಬಗ್ಗೆ ಸಿಂಡಿಕೇಟ್ ಗಮನಕ್ಕೆ ತಂದಿರುವುದಿಲ್ಲ. ಪರೀಕ್ಷಾ ವಿಭಾಗದ ಈ ಎಲ್ಲಾ ವೈಫಲ್ಯಗಳಿಗೆ ಸಭಾಧ್ಯಕ್ಷರು ಸಭೆಗೆ ಉತ್ತರ ನೀಡಬೇಕೆಂದು ಅಗ್ರಹಿಸಿದರು.

ಡಾ: ಗೋವಿಂದರಾಜು ಅವರು ಮಾತನಾಡಿ ಸರಿಯಾದ ಸಮಯಕ್ಕೆ ಪರೀಕ್ಷೆ ನಡೆಸುವುದು, ನಿಗದಿತ ವೇಳೆಯೊಳಗೆ ಪರೀಕ್ಷಾ ಫಲಿತಾಂಶ ಪ್ರಕಟಿಸುವುದು, ಅಂಕಪಟ್ಟಿ/ಪದವಿ ಪ್ರಮಾಣ ಪತ್ರ ನೀಡುವುದು ಹಾಗೂ ಘಟಿಕೋತ್ಸವ ನಡೆಸುವ ಬಗ್ಗೆ ಒಂದು ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ತಿಳಿಸಿದರು. ಅವರು ಮುಂದುವರೆದು ಪ್ರಸ್ತುತ ಹಳೆಯ ಪ್ರಕರಣಗಳು ಎಷ್ಟಿವೆ, ಅವುಗಳನ್ನು ಬಗೆಹರಿಸಲಾಗದಿದ್ದಕ್ಕೆ ಕಾರಣಗಳೇನು, ನೌಕರರ ಸಮಸ್ಯೆ ಇದೆಯೇ ಇವೆಲ್ಲವುದಕ್ಕೂ ಕುಲಸಚಿವರು (ಮೌಲ್ಯಮಾಪನ) ಅವರು ಉತ್ತರ ನೀಡಬೇಕೆಂದು ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ರವರು ಮಾತನಾಡಿ ಅಂಚೆ ತೆರಪು ಹಾಗೂ ದೂರ ಶಿಕ್ಷಣ ಪರೀಕ್ಷೆಗೆ ಸಂಬಂಧಿಸಿದಂತೆ ಒಂದು ವಿಷಯದ ಬಗ್ಗೆ ನಿಗಧಿಪಡಿಸಿದ ಪ್ರಶ್ನೆಪತ್ರಿಕೆ ವ್ಯತ್ಯಾಸದಿಂದ ಕೂಡಿದೆ ಎಂದು ರಾತ್ರಿ 9 ಗಂಟೆಗೆ ಮಾಹಿತಿ ಬಂತು. ಅನಿವಾರ್ಯ ಕಾರಣದಿಂದಾಗಿ ತಕ್ಷಣ ಕ್ರಮಕೈಗೊಳ್ಳಬೇಕಾದ ಅವಶ್ಯಕತೆ ಇದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆ ವಿಷಯಕ್ಕೆ ಸಂಬಂಧಪಟ್ಟಂತೆ ಪರೀಕ್ಷೆಯನ್ನು ಮುಂದೂಡಲಾಯಿತು. ಈ ವಿಷಯವನ್ನು ಆಡಳಿತಾಂಗಕ್ಕೆ ಕುಲಪತಿಗಳಿಗೆ ತಿಳಿಸಲು ಆಗದ್ದಕ್ಕೆ ಕ್ಷಮೆಯಾಚಿಸಿದರು. ಈ ವಿಷಯವಾಗಿ ಕಡತವನ್ನು ಮಾನ್ಯ ಕುಲಪತಿಗಳಿಗೆ ಸಲ್ಲಿಸಿರುವುದಾಗಿ ತಿಳಿಸಿದರು. ಅವರು ಮುಂದುವರೆದು ಅಂಕಪಟ್ಟಿ ವಿತರಣೆಗೆ ಸಂಬಂಧಪಟ್ಟಂತೆ ಸಾಪ್ಟ್‌ವೇರ್ ಸಿದ್ಧಪಡಿಸಿದ್ದು, ಅದನ್ನು ಪರೀಕ್ಷಿಸಲಾಗುತ್ತಿದೆ. ಈ ಸಾಪ್ಟ್‌ವೇರ್ ಅಳವಡಿಸಿದ ನಂತರ ಅಂಕಪಟ್ಟಿ ಸಂಬಂಧಪಟ್ಟ ಸಮಸ್ಯೆಗಳನ್ನು ಕಛೇರಿ ಅಧೀಕ್ಷಕರ ಹಂತದಲ್ಲಿಯೇ ಬಗೆಹರಿಸಿ ವಿದ್ಯಾರ್ಥಿಗಳಿಗೆ ನಿಗದಿತ ಅವಧಿಯೊಳಗೆ ಅಂಕಪಟ್ಟಿಗಳನ್ನು ನೀಡಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಪ್ರೊ. ಟಿ.ವಿ ರಾಜು ರವರು ಮಾತನಾಡಿ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ದೂರುಗಳನ್ನು ನಿಗದಿತ ಅವಧಿಯೊಳಗೆ ಬಗೆಹರಿಸಬೇಕು. ಒಂದು ವೇಳೆ ನಿಗದಿತ ಅವಧಿಯೊಳಗೆ ಬಗೆಹರಿಸಲು ಸಾಧ್ಯವಾಗದಿರುವ ಪ್ರಕರಣಗಳನ್ನು ಸಿಂಡಿಕೇಟ್ ರಚಿಸಿರುವ ಉಪಸಮಿತಿಯ ಮುಂದೆ ತರಲು ಕೋರಿದರು. ಡಾ. ಗೋವಿಂದರಾಜು ರವರು ಮಾತನಾಡಿ Single window ವ್ಯವಸ್ಥೆ ಮಾಡಿ, ವಿಭಾಗವಾರು ದೂರುಗಳನ್ನು ಪಡೆದುಕೊಂಡು ಸಂಬಂಧಿಸಿದ ವಿಭಾಗದ ಮೇಲ್ವಿಚಾರಕರಿಗೆ ಸಲ್ಲಿಸಲು ಒಂದು ವ್ಯವಸ್ಥೆಯನ್ನು ಮಾಡಬೇಕು, ಹಾಗೂ ಸದರಿ ವ್ಯವಸ್ಥೆಯನ್ನು ಮೇಲ್ವಿಚಾರಣೆ ನೋಡಿಕೊಳ್ಳಲು ಒಬ್ಬ ಸಿಬ್ಬಂದಿಯನ್ನು ನೇಮಿಸಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಪರೀಕ್ಷೆಯ ಅಂಕಪಟ್ಟಿ, ಪದವಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಕುಂದು-ಕೊರತೆಗಳನ್ನು ಬಗೆಹರಿಸಲು Single window ವ್ಯವಸ್ಥೆ ಆಗಬೇಕು. ಒಂದು ಕುಂದು-ಕೊರತೆ ವಿಭಾಗವನ್ನು ಸ್ಥಾಪಿಸಿ ಆ ವಿಭಾಗದ ವತಿಯಿಂದ ವಿದ್ಯಾರ್ಥಿಗಳಿಂದ ಮನವಿಯನ್ನು ಸ್ವೀಕರಿಸಿ ಅದನ್ನು ಸಂಬಂಧಪಟ್ಟ ವಿಭಾಗಕ್ಕೆ ರವಾನಿಸಿ ವಿದ್ಯಾರ್ಥಿಗಳ ಸಮಸ್ಯೆಯನ್ನು ಬಗೆಹರಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದು ಹಾಗೂ ಯಾವುದೇ ವಿದ್ಯಾರ್ಥಿ ಸಂಬಂಧಪಟ್ಟ ವಿಷಯ ನಿರ್ವಾಹಕರಾಗಲಿ ಅಥವಾ ಅಧೀಕ್ಷಕರನ್ನು ಭೇಟಿ ಮಾಡುವ ಅವಕಾಶ ನೀಡದ ಹಾಗೇ

ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಅವರು ಮುಂದುವರೆದು, ಪರೀಕ್ಷೆಯನ್ನು ಮುಂದೂಡಿರುವ ಬಗ್ಗೆ ಕಡತವನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್‌ಲಾಲ್ ರವರು ಸದರಿ ವಿಷಯದ ಬಗ್ಗೆ ಮಾತನಾಡಿ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು 2018 ರಿಂದ ನೀಡಿರುವುದಿಲ್ಲ. ಇನ್ನೂ 15 ದಿನಗಳೊಳಗೆ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡಲು ವ್ಯವಸ್ಥೆ ಮಾಡಬೇಕು. ಎಲ್ಲಾ ವಿದ್ಯಾರ್ಥಿಗಳಿಗೆ Non-tearable ಅಂಕಪಟ್ಟಿಗಳನ್ನು ವಿತರಿಸಬೇಕು. Non-tearable ಅಂಕಪಟ್ಟಿಗಳನ್ನು ಖರೀದಿಸುವ ಬಗ್ಗೆ ಟೆಂಡರ್ ಅನ್ನು ಅಂತಿಮಗೊಳಿಸಿ ಸಿಂಡಿಕೇಟ್ ಅನುಮೋದಿಸಿದೆ. ಆದರೂ ಕೂಡ ಟೆಂಡರ್ ಅನ್ನು ರದ್ದುಗೊಳಿಸಲಾಗಿದೆ. ಆದ್ದರಿಂದ ಆ ಕ್ರಮವನ್ನು ಹಿಂಪಡೆದು ಸಿಂಡಿಕೇಟ್ ನಿರ್ಣಯದನುಸಾರ Non-tearable ಅಂಕಪಟ್ಟಿಯನ್ನು ಪಡೆದುಕೊಳ್ಳಲು ಕ್ರಮ ಕೈಗೊಳ್ಳಲು ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಅವರು ಮುಂದುವರೆದು ಅಂಚೆ ತೆರಪು ಹಾಗೂ ದೂರ ಶಿಕ್ಷಣ ಪರೀಕ್ಷೆಯನ್ನು ಮುಂದೂಡಲಿಕ್ಕೆ ಕಾರಣರಾದವರ ಬಗ್ಗೆ ಕ್ರಮ ಕೈಗೊಳ್ಳಲು ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕು, ಪರೀಕ್ಷಾ ವಿಭಾಗದಲ್ಲಿ 10–15 ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರನ್ನು ವರ್ಗಾವಣೆ ಮಾಡಬೇಕೆಂದು ತಿಳಿಸಿದರು.

*ನಿರ್ಣಯ:*

ಚರ್ಚೆಯ ನಂತರ ಈ ಹಿಂದೆ ಸಿಂಡಿಕೇಟ್ ತೆಗೆದುಕೊಂಡ ನಿರ್ಣಯದಂತೆ ವಿದ್ಯಾರ್ಥಿಗಳಿಗೆ Non-tearable ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರಗಳನ್ನು ನೀಡಲು ಹಾಗೂ ಈಗಾಗಲೇ ಸಿಂಡಿಕೇಟ್ ಟೆಂಡರ್ ಅನ್ನು ಅನುಮೋದಿಸಿರುವಂತೆ ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರಗಳನ್ನು ಪಡೆದುಕೊಳ್ಳುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಸಿಂಡೀಕೇಟ್ ನಿರ್ಣಯಿಸಿತು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಾದ ಕುಲಪತಿಗಳು, ಕುಲಸಚಿವರು, ಕುಲಸಚಿವರ (ಮೌಲ್ಯಮಾಪನ) ಮತ್ತು ವಿತ್ತಾಧಿಕಾರಿಗಳು ಕಛೇರಿ ದಿವಸಗಳಂದು ಪ್ರತಿನಿತ್ಯ ಎರಡು ಭಾರಿ ಅಂದರೆ ಬೆಳಗ್ಗೆ ಹಾಗೂ ಸಾಯಾಂಕಾಲ ಸಭೆ ಸೇರಿ ಅಂದಿನ ಪರಿಸ್ಥಿತಿಗಳನ್ನು ಅವಲೋಕಿಸಿದರೆ ಬಹುತೇಕ ಸಮಸ್ಯಗಳು ಬಾರದ ಹಾಗೆ ನೋಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಅವರು ಮುಂದುವರೆದು, ಕರ್ನಾಟಕ ಸರ್ಕಾರ ಯು.ಯು.ಸಿ.ಎಂ.ಎಸ್ ಸಾಫ್ಟ್‌ವೇರ್ ಅಳವಡಿಸಿದ್ದು, ಎಲ್ಲಾ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷೆ ಹಾಗೂ ಕಾಲೇಜುಗಳ ಸಂಯೋಜನೆಯನ್ನು ಸದರಿ ತಂತ್ರಜ್ಞಾನದ ಮೂಲಕ ಪ್ರಸಕ್ತ ಸಾಲಿನಿಂದ ನಿರ್ವಹಿಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ಮಟ್ಟದಲ್ಲಿ ಯು.ಯು.ಸಿ.ಎಂ.ಎಸ್ ಕಛೇರಿಯನ್ನು ಸ್ಥಾಪಿಸಿದ್ದು ತಾಂತ್ರಿಕ ಸಿಬ್ಬಂದಿಯನ್ನು ಸಹ ನೇಮಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್‌ಲಾಲ್ ರವರು ಮಾತನಾಡಿ ಕಳೆದ ತಿಂಗಳು Deccan Hearald ತಾಂತ್ರಿಕ ಕೋರ್ಸುಗಳು, ಹಾಗೂ ಇತರ ಸ್ನಾತಕ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಒಂದು ಮೇಳವನ್ನು ಆಯೋಜಿಸಿದ್ದರಿಂದ ವಿದ್ಯಾರ್ಥಿಗಳು ಪ್ರವೇಶಾತಿ / ಕಾಲೇಜುಗಳ ಬಗ್ಗೆ ಸಾಕಷ್ಟು ಮಾಹಿತಿ ಪಡೆದುಕೊಂಡರು. ಅದೇ ರೀತಿ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಕಾಲೇಜುಗಳಿಗೆ ಪ್ರವೇಶಾತಿ ವಹಿಸುವ

ವಿದ್ಯಾರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳು, ಕಾಲೇಜುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಲು ಹಾಗೂ ಎಲ್ಲಾ ಕಾಲೇಜುಗಳಿಗೆ ಸಮಾನ ಅವಕಾಶ ನೀಡಲನುವಾಗಲು ಒಂದು ಮೇಳವನ್ನು ಆಯೋಜಿಸಿ ಎಲ್ಲಾ ಕಾಲೇಜುಗಳು ಮೇಳದಲ್ಲಿ ಸ್ಟಾಲ್‌ಗಳನ್ನು ನಿರ್ಮಿಸಿ ತಮ್ಮ ಕಾಲೇಜುಗಳ ಕೋರ್ಸು ಹಾಗೂ ಮೂಲ ಸೌಕರ್ಯಗಳ ಬಗ್ಗೆ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು. ಈ ಬಗ್ಗೆ ಒಂದು ಸಮಿತಿಯನ್ನು ಸಹ ರಚಿಸಬೇಕೆಂದರು.

ಡಾ. ಗೋವಿಂದರಾಜು ರವರು ಮಾತನಾಡಿ ಈಗಾಗಲೇ ಸ್ನಾತಕ ಕೋರ್ಸಿನ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶಾತಿ ಪ್ರಾರಂಭವಾಗಿದ್ದು, ಬಹುತೇಕ ಕಾಲೇಜುಗಳು ಪ್ರವೇಶಾತಿಯನ್ನು ಮುಗಿಸಿರುವುದರಿಂದ, ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲೇ ಪ್ರವೇಶಾತಿ ಸಂಬಂಧ ಮೇಳವನ್ನು ಹಮ್ಮಿಕೊಳ್ಳುವುದು ಒಳಿತೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ದೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಇನ್ನು ಪ್ರಾರಂಭವಾಗಿಲ್ಲದಿರುವುದರಿಂದ ಸ್ನಾತಕೋತ್ತರ ಕೋರ್ಸುಗಳು, ಮೂಲ ಸೌಕರ್ಯ ಮುಂತಾದುವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಒಂದು ಮೇಳವನ್ನು ಆಯೋಜಿಸಲು ಹಾಗೂ ಸಂಬಂಧಿಸಿದ ರೂಪುರೇಷೆಗಳನ್ನು ಸಿದ್ಧಪಡಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

1. ಶ್ರೀ ಪ್ರೇಮ್ ಸೋಹನ್‌ಲಾಲ್ – ಅಧ್ಯಕ್ಷರು
2. ಡಾ. ಎಂ. ಶೈಲಜ – ಸದಸ್ಯರು
3. ಡಾ. ಬಿ.ಆರ್ ಧನಂಜಯ – ಸದಸ್ಯರು
4. ಶ್ರೀ ಟಿ. ಕುಮಾರ – ಸದಸ್ಯರು
5. ಉಪ ಕುಲಸಚಿವರು ವಿದ್ಯಾಕಾರ್ಯ ಶಾಖೆ–4 – ಸಂಚಾಲಕರು

***Extract of the Proceedings of the Special meeting of the Syndicate held on 11.07.2022***

**Item No. 01:** Proposal for engaging the services of a Nationalized Bank for online fee collection from the students/colleges of Bangalore University.

***Resolution:***

Sri Prem Sohanlal, expressed that though the Syndicate had taken a decision to entrust the work of online fee collection to the State Bank of Mysore and finalization of MoU in this regard, the earlier administration has continued the services of Axis Bank. The Axis Bank used to retain the fee collected from the Students for a period

of seven days and in some cases the Axis Bank delayed the transfer of fund to Bangalore University.

The Registrar (Evaluation), informed that the State Bank of India is not giving Gateway facility. The University has to engage the services of an agency to inter face the transactions with Gateway.

The Registrar informed that the State Government has directed to switch over to the nationalized Bank i.e., State Bank of India and the University has no option but to entrust the online fee collection work to SBI instead of Axis Bank as the State audit as well as A.G audit have raised objections for engaging the services of Axis Bank.

After detailed discussions, the Syndicate resolved to close all accounts with the Axis Bank and to entrust the online fee collection work to the State Bank of India immediately.

***Proceedings of the Special meeting of the Syndicate held on 11.07.2022***

**ವಿಷಯ ಸಂಖ್ಯೆ 02:** ಶ್ರೀ ಶಿವಾರೆಡ್ಡಿ, ನಿವೃತ್ತ ಹಿರಿಯ ಸಹಾಯಕರು ಇವರು ಹಣಕಾಸು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಸಂದರ್ಭದಲ್ಲಿ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ವಿಶ್ವವಿದ್ಯಾಲಯವು ಸದರಿಯವರ ವಿರುದ್ಧ ನಡೆಸಿರುವ ಇಲಾಖಾ ವಿಚಾರಣಾ ವರದಿ ದಿನಾಂಕ 11.01.2019 ರನ್ವಯ ಹಾಗೂ ಶ್ರೀ ಶಿವಾರೆಡ್ಡಿ ವಿಷಯದಲ್ಲಿ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ವರದಿಯ ಕಂಡಿಕೆ 2.1.2 ರನ್ನು ಪರಿಗಣಿಸಿ ಶ್ರೀ ಶಿವಾರೆಡ್ಡಿರವರಿಗೆ ಸೂಕ್ತ ದಂಡನೆಯನ್ನು ವಿಧಿಸುವ ಬಗ್ಗೆ.

*ನಿರ್ಣಯ:*

ಡಾ. ಸುಧಾಕರ್ ಹೆಚ್ ರವರು ಮಾತನಾಡಿ ಶ್ರೀ ಕೆ.ವಿ. ಶಿವಾರೆಡ್ಡಿ ಅವರು ವಿಶ್ವವಿದ್ಯಾಲಯದ ಹಣಕಾಸಿನ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಆರೋಪ ಸಾಬೀತಾಗಿದೆ ಎಂದು ಶ್ರೀ ಬಿ. ಶಿವಲಿಂಗೇಗೌಡ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಮತ್ತು ವಿಚಾರಣಾಧಿಕಾರಿಗಳು ಇವರು ಇಲಾಖಾ ವಿಚಾರಣಾ ವರದಿಯನ್ನು ದಿನಾಂಕ 11.01.2019 ರಂದು ಸಲ್ಲಿಸಿದ್ದರೂ, ಇಲ್ಲಿಯವರೆಗೆ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಹಿಂದಿನ ಕುಲಪತಿಗಳು ಕಡತದಲ್ಲಿ "Keep it in abeyance" ಎಂದು ನಮೂದಿಸಿ ಆರೋಪಿತ ನೌಕರರಿಗೆ ಅನುಕೂಲ ಮಾಡಲು ವಿಳಂಬ ನೀತಿಯನ್ನು ಅನುಸರಿಸಿದ್ದಾರೆ. ಆದ್ದರಿಂದ ಹಿಂದಿನ ಕುಲಪತಿಗಳಿಂದ ವಿವರಣೆ ಪಡೆದುಕೊಳ್ಳಬೇಕೆಂದು ತಿಳಿಸಿದರು. ಡಾ. ಗೋವಿಂದರಾಜು ರವರು ಮಾತನಾಡಿ ಹಣ ದುರುಪಯೋಗ ಮಾಡಿರುವ ಸಿಬ್ಬಂದಿಯಿಂದ ಬಡ್ಡಿ ಸಮೇತ ಆಕ್ಷೇಪಿತ ಮೊತ್ತವನ್ನು ವಸೂಲಾತಿ ಮಾಡಬೇಕು ಹಾಗೂ ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ ದಂಡನೆಯನ್ನು ತಪ್ಪಿತಸ್ಥ ನೌಕರರಿಗೆ ವಿಧಿಸಬೇಕೆಂದು ತಿಳಿಸಿದರು.

ಚರ್ಚೆಯ ನಂತರ (1) ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಿರುವಂತೆ ಶ್ರೀ ಕೆ.ವಿ ಶಿವಾರೆಡ್ಡಿಯವರು 2016–17ನೇ ಸಾಲಿನಲ್ಲಿ ಹಣ ದುರುಪಯೋಗ ಮಾಡಿರುವ ಬಗ್ಗೆ ವರದಿಯಾಗಿದ್ದು, ಸದರಿ ಅವಧಿಗಿಂತಲೂ ಹಿಂದಿನ ವರ್ಷಗಳಲ್ಲಿ ಸುಮಾರು ಹದಿನಾಲ್ಕು ವರ್ಷಗಳ ಕಾಲ ಅವರು ಹಣಕಾಸು ವಿಭಾಗದಲ್ಲಿ ಕೆಲಸ ನಿರ್ವಹಿಸಿರುವುದರಿಂದ ಆ ಅವಧಿಯಲ್ಲಿ ಶ್ರೀ ಕೆ.ವಿ. ಶಿವಾರೆಡ್ಡಿ ಅವರು ಕಾರ್ಯನಿರ್ವಹಿಸಿದ ಕೆಲಸ ಕಾರ್ಯಗಳ ಬಗ್ಗೆ ಸಹ Audit ಮಾಡಿಸಬೇಕು; (2) ಶ್ರೀ ಕೆ. ವಿ. ಶಿವಾರೆಡ್ಡಿ ಅವರಿಂದ ಅವರು ದುರುಪಯೋಗ ಮಾಡಿಕೊಂಡಿರುವ ರೂ. 5,30,026/– (ಐದು ಲಕ್ಷ ಮೂವತ್ತು ಸಾವಿರದ ಇಪ್ಪತ್ತಾರು ರೂಪಾಯಿಗಳು) ಮೊತ್ತವನ್ನು ವಸೂಲಾತಿ ಮಾಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು; ಹಾಗೂ (3) ಶ್ರೀ ಕೆ.ವಿ. ಶಿವಾರೆಡ್ಡಿಯವರ ವಿರುದ್ಧ ಮಾಡಿರುವ ಆರೋಪವು ಸಾಬೀತಾಗಿದೆ ಎಂದು ನಿವೃತ್ತ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿನ ಸಮಿತಿಯು ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ, ವಿಶ್ವವಿದ್ಯಾಲಯ ಹೂಡಿರುವ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 33190/2018 ರಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೊಳಪಟ್ಟು ಶ್ರೀ ಕೆ.ವಿ. ಶಿವಾರೆಡ್ಡಿ ಅವರಿಗೆ ವಿಶ್ವವಿದ್ಯಾಲಯ ಪರಿನಿಯಮಾವಳಿ 28.5 ಉಪಬಂಧ (v) ರ ಅನುಸಾರ ಅವರಿಗೆ ಅವರು ಹಣ ದುರುಪಯೋಗ ಮಾಡಿದ ಅವಧಿಯಿಂದ ಜಾರಿಗೆ ಬರುವಂತೆ ಸಹಾಯಕ ಹುದ್ದೆಗೆ ಹಿಂಬಡ್ತಿ ನೀಡಿ ಶಿಕ್ಷೆ ವಿಧಿಸಲು ಸಿಂಡಿಕೇಟ್ ನಿರ್ಣಯಿಸಿತು ಮತ್ತು (4) ಈ ಬಗ್ಗೆ ನ್ಯಾಯಾಲಯದಲ್ಲಿ ಕೇವಿಯಟ್ ಅರ್ಜಿ ಸಲ್ಲಿಸಬೇಕೆಂದು ಸೂಚಿಸಿತು.

ಸದರಿ ವಿಷಯದಲ್ಲಿ ವಿಳಂಬ ನೀತಿ ಅನುಸರಿಸಿ ಸಂಬಂಧಿಸಿದ ಕಡತದಲ್ಲಿ "Keep it in abeyance" ಎಂದು ನಮೂದಿಸಿರುವ ಬಗ್ಗೆ ಹಿಂದಿನ ಕುಲಪತಿಗಳಿಂದ ವಿವರಣೆ ಪಡೆಯಬೇಕೆಂದು ಸಿಂಡಿಕೇಟ್ ಸೂಚಿಸಿತು.



**ವಿಷಯ ಸಂಖ್ಯೆ 03:** ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 2013–14ನೇ ಸಾಲಿನ ಸಾಮಾನ್ಯ ಮತ್ತು ಸಾಮಾಜಿಕ ವಲಯದ ವರದಿಯಲ್ಲಿನ ಕಂಡಿಕೆ 4.06 ರಲ್ಲಿ ಕೋಲಾರ ಸ್ನಾತಕೋತ್ತರ ಕೇಂದ್ರ ಕಟ್ಟಡದ ವಿನ್ಯಾಸವನ್ನು ಹಸ್ತಾಂತರಿಸುವಲ್ಲಿ ಸಾಮಾನ್ಯ ವಿಳಂಬವು ಗುತ್ತಿಗೆದಾರರನ್ನು ಮಧ್ಯದಲ್ಲಿಯೇ ಕಾಮಗಾರಿಯನ್ನು ಸ್ಥಗಿತಗೊಳಿಸುವಲ್ಲಿ ಮತ್ತು ರೂ. 1.95 ಕೋಟಿ ವೆಚ್ಚವು ಅಧಿಕವಾಗಿರುವ ವಿಷಯದ ಬಗ್ಗೆ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

***ನಿರ್ಣಯ:***

ಕುಲಪತಿಗಳು ಮಾತನಾಡಿ ಕೋಲಾರ ಸ್ನಾತಕೋತ್ತರ ಕಟ್ಟಡ ಕಾಮಗಾರಿ ವಿಳಂಬದ ಬಗ್ಗೆ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ 2013–14ನೇ ಸಾಲಿನ ಸಾಮಾನ್ಯ ಮತ್ತು ಸಾಮಾಜಿಕ ವಲಯದ ವರದಿ ಕಂಡಿಕೆ 4.06 ರಲ್ಲಿನ ಆಕ್ಷೇಪಣೆಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಕೈಬಿಟ್ಟಿದೆ. ಆದರೆ ಸದರಿ ಲೋಪವು ವಿಶ್ವವಿದ್ಯಾಲಯದಲ್ಲಿ ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರ ನಿರ್ದೇಶಿಸಿರುವುದರಿಂದ ಈ ಬಗ್ಗೆ ಒಂದು ವರದಿ ಸಲ್ಲಿಸಲು ಸಮಿತಿ ರಚಿಸುವ ಕುರಿತು ವಿಷಯವನ್ನು ಸಿಂಡಿಕೇಟ್ ಪರಿಗಣನೆಗಾಗಿ ಮಂಡಿಸಲಾಗಿದೆಯೆಂದು ತಿಳಿಸಿದರು.

Lynthia Muga

ದೀರ್ಘ ಚರ್ಚೆಯ ನಂತರ ಸದರಿ ಪ್ರಕರಣಗಳು ಮರುಕಳಿಸದಂತೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಒಂದು ವರದಿ ಸಲ್ಲಿಸಲು ಈ ಕೆಳಕಂಡ ಸಮಿತಿ ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

1. ಚಾರ್ಟೆಡ್ ಅಕೌಂಟೆಂಟ್ಸ್
2. ಕುಲಪತಿಗಳು ನಾಮನಿರ್ದೇಶನ ಮಾಡುವ ಒಬ್ಬ ಸಿಂಡಿಕೇಟ್ ಸದಸ್ಯರುಗಳು
3. ಕಾನೂನು ಸಲಹೆಗಾರರು / ವಕೀಲರು
4. ಕುಲಪತಿಗಳು ನಾಮನಿರ್ದೇಶನ ಮಾಡುವ ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ (ಪಿ.ಡಬ್ಲ್ಯೂ.ಡಿ)
5. ಒಬ್ಬ ಸಿವಿಲ್ ಇಂಜಿನಿಯರಿಂಗ್ ಪ್ರಾಧ್ಯಾಪಕರು



**Item No. 04:** Ministry of Science and Technology ಧನಸಹಾಯ ಸಂಸ್ಥೆಯ ಸ್ವೀಕೃತಿ ಮತ್ತು ಪಾವತಿಗಾಗಿ ICICI Bank ಅಥವಾ Bank of Maharashtra ಶಾಖೆಯಲ್ಲಿ ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮೋದನೆ ಕುರಿತು.

***Resolution:***

The Syndicate resolved to open a Sweep in Sweep out Savings Bank account in the Bank of Maharashtra to enable to transfer fund to the Bangalore University by the Department of Science and Technology (DST), Ministry of Science and Technology, GoI towards funding for projects / Women Scientist scheme for research in Basic / Applied Sciences, as per the directions of the DST, Government of India, vide letter no MST/PAO/TSA/Model1&2/2022-23/22.

*Proceedings of the Special meeting of the Syndicate held on 11.07.2022*

**ವಿಷಯ ಸಂಖ್ಯೆ 05** ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯ ಅನುಪಾಲನಾ ಲೆಕ್ಕಪರಿಶೋಧನಾ ಅಧ್ಯಾಯ –ಉನ್ನತ ಶಿಕ್ಷಣ ಇಲಾಖೆ–2.1.1 ಬೆಂಗಳೂರು ವಿಶ್ವವಿದ್ಯಾಲಯ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಿಬ್ಬಂದಿಗಳು ಶುಲ್ಕವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ.

**ಮತ್ತು**

ಬೆಂಗಳೂರು ವಿಶ್ವವಿದ್ಯಾಲಯದ ಹಾಗೂ ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ 2016–17 ಹಾಗೂ 2017–18 ನೇ ಸಾಲಿನ SAP ಅಧ್ಯಯನ ಸಲುವಾಗಿ 3800 ವಿದ್ಯಾರ್ಥಿಗಳಿಂದ ರೂ. 6,000/– ದಂತೆ ಸಂಗ್ರಹಿಸಲಾದ ಮೊತ್ತ ರೂ. 2,28,00,000/– ಗಳ ಅವ್ಯವಹಾರದ ಬಗ್ಗೆ.

***ನಿರ್ಣಯ:***

ಕುಲಪತಿಗಳು ಮಾತನಾಡಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ತಮ್ಮ ಲೆಕ್ಕ ಪರಿಶೋಧನಾ ವರದಿಯಲ್ಲಿ 2014-15 ನೇ ಸಾಲಿನಿಂದ 2018-19ನೇ ಸಾಲಿನ ಅವಧಿಯಲ್ಲಿ ಎಂ.ಬಿ.ಎ ಹಗಲು ಹಾಗೂ ಸಂಜೆ ಕೋರ್ಸಿಗೆ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿಯಲ್ಲಿ ರೂ. 23.30 ಲಕ್ಷಗಳ ಅವ್ಯವಹಾರ ಹಾಗೂ ಹಣ ದುರುಪಯೋಗ ನಡೆದಿದೆ ಎಂದು ಮತ್ತು ರೂ. 13,59,040/- ಅನ್ನು ವಸೂಲು ಮಾಡಲು ಸೂಚಿಸಿದೆ. ಸದರಿ ಅವಧಿಯಲ್ಲಿ ಡಾ. ಕೆ. ಜನಾರ್ಧನಂ ಅವರು ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿರುತ್ತಾರೆಂದು ತಿಳಿಸಿ, ಸದರಿ ವಿಷಯದ ಬಗ್ಗೆ ಡಾ. ಕೆ. ಜನಾರ್ಧನಂ ಅವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 4946/2020-21 ಹಾಗೂ ವಿಶ್ವವಿದ್ಯಾಲಯದಿಂದ ದಾಖಲಿಸಿರುವ Statement of Objections ವಿವರಗಳನ್ನು ಸಹ ಸಭೆಗೆ ತಿಳಿಸಿದರು.

ಕುಲಪತಿಗಳು ಮುಂದುವರೆದು ಮಾತನಾಡಿ ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ 2016-17 ಹಾಗೂ 2017-18 ನೇ ಸಾಲಿನ SAP ಅಪ್ಲಿಕೇಷನ್ಸ್ ಕೋರ್ಸು ಅಧ್ಯಯನ ಸಲುವಾಗಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಮೊತ್ತದಲ್ಲಿ ಅವ್ಯವಹಾರ ನಡೆದಿದ್ದು ಸದರಿ ತರಬೇತಿ ಕಾರ್ಯಕ್ರಮದ ಸಂಯೋಜಕರಾದ ಡಾ. ಕೆ. ಜನಾರ್ಧನಂ ಅವರಿಂದ ರೂ. 2.28 ಕೋಟಿ ಮೊತ್ತವನ್ನು ವಸೂಲಾತಿ ಮಾಡಿ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡುವಂತೆ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕ ಪತ್ರ ಇಲಾಖೆಯು ಸೂಚಿಸಿದೆ ಎಂದು ಸಭೆಗೆ ತಿಳಿಸಿ ಈ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯವು ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನಲ್ಲಿ 2014-15 ರಿಂದ 2018-19 ನೇ ಸಾಲಿನವರೆಗೆ ನಡೆದಿರುವ ಹಣಕಾಸು ದುರುಪಯೋಗ/ಅವ್ಯವಹಾರದ ಬಗ್ಗೆ ಡಾ. ಕೆ. ಜನಾರ್ಧನಂ ಅವರ ಮೇಲೆ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಲಾಗಿರುತ್ತದೆ ಎಂದು ಸಭೆಗೆ ವಿವರಗಳನ್ನು ಮಂಡಿಸಿ ಈ ವಿಷಯಗಳ ಬಗ್ಗೆ ಸಿಂಡಿಕೇಟ್‌ನ ನಿರ್ಣಯವನ್ನು ಕೋರಿದರು.

ಕುಲಸಚಿವರು ಮಾತನಾಡಿ ಎಂ.ಬಿ.ಎ ಸಂಜೆ ಕೋರ್ಸಿಗೆ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಹಣ ದುರುಪಯೋಗದ ಬಗ್ಗೆ ಬೆಂಗಳೂರು ನಗರ ವಿಶ್ವವಿದ್ಯಾಲಯದೊಂದಿಗೆ ನಡೆಸಿದ ಪತ್ರ ವ್ಯವಹಾರಗಳ ವಿವರಗಳನ್ನು ಸಭೆಯ ಗಮನಕ್ಕೆ ತಂದರು.

ದೀರ್ಘ ಚರ್ಚೆಯ ನಂತರ ಸಿಂಡಿಕೇಟ್

(1) ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನಲ್ಲಿ 2014-15 ರಿಂದ 2018-19 ನೇ ಸಾಲಿನವರೆಗೆ ನಡೆದಿರುವ ಹಣಕಾಸು ದುರುಪಯೋಗ/ಅವ್ಯವಹಾರದ ಬಗ್ಗೆ ಡಾ. ಕೆ. ಜನಾರ್ಧನಂ ಅವರ ಮೇಲೆ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುವ ಕ್ರಮವನ್ನು ಅನುಸಮರ್ಥಿಸಿತು;

(2) ಡಾ. ಜನಾರ್ಧನಂ, ಕೆನರಾ ಬ್ಯಾಂಕ್ ಸ್ಕೂಲ್ ಆಪ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಉಳಿದ ಅವಧಿಯಲ್ಲಿ ನಡೆದಿರಬಹುದಾದಂತಹ ಹಣಕಾಸಿನ ಅವ್ಯವಹಾರದ ಬಗ್ಗೆ Audit ಮಾಡಿಸಬೇಕೆಂದು ಸಿಂಡಿಕೇಟ್ ಸೂಚಿಸಿತು;

(3) ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಹಾಗೂ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕ ಪತ್ರ ಇಲಾಖೆಯು ತಮ್ಮ ವರದಿಗಳಲ್ಲಿ ಆಕ್ಷೇಪಿಸಿರುವ ಮೊತ್ತವನ್ನು ಡಾ. ಕೆ. ಜನಾರ್ಧನಂ ಅವರಿಂದ ವಸೂಲಾತಿ ಮಾಡಬೇಕೆಂದು (Revenue recovery) ಸಿಂಡಿಕೇಟ್ ನಿರ್ಣಯಿಸಿತು.

***Proceedings of the Special meeting of the Syndicate held on 11.07.2022***

**ವಿಷಯ ಸಂಖ್ಯೆ 06:** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಆಯೋಜಿಸುತ್ತಿರುವ ಕಾರ್ಯಗಾರ/ಸೆಮಿನಾರ್ ವಿಚಾರ ಸಂಕಿರಣ ಇವುಗಳಿಗೆ ಅನುದಾನ ಒದಗಿಸುವ ಬಗ್ಗೆ.

*ನಿರ್ಣಯ:*

ಕಾರ್ಯಗಾರ/ಸೆಮಿನಾರ್ ವಿಚಾರ ಸಂಕಿರಣಗಳಿಗೆ ವಿಶ್ವವಿದ್ಯಾಲಯದ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದ ವಿವರಗಳೊಂದಿಗೆ ವಿಷಯವನ್ನು ಮರುಮಂಡಿಸಲು ಸಿಂಡಿಕೇಟ್ ಸೂಚಿಸಿತು.

***Proceedings of the Special meeting of the Syndicate held on 11.07.2022***

**ವಿಷಯ ಸಂಖ್ಯೆ 07:** ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗದಲ್ಲಿ 2022-23ನೇ ಶೈಕ್ಷಣಿಕ ಸಾಲಿನಿಂದ ನೂತನವಾಗಿ ಪ್ರಾರಂಭವಾಗಲಿರುವ Five-Year Integrated B.Sc and M.Sc Programmes in Geography with specialization of Geo informatics or Natural Disaster Management ಕೋರ್ಸುಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳ ಕುರಿತು ಕ್ರಮವಹಿಸುವ ಕುರಿತು.

*ನಿರ್ಣಯ:*

ಡಾ ಜೆ.ಟಿ ದೇವರಾಜು ಅವರು ಮಾತನಾಡಿ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ 04 ವರ್ಷ ಬಿ.ಎಸ್ಸಿ ಇಂಟಿಗ್ರೇಟೆಡ್ ಕೋರ್ಸನ್ನು ಪ್ರಾರಂಭಿಸಲು ಅವಕಾಶವಿರುತ್ತದೆ. ಆದ್ದರಿಂದ 05 ವರ್ಷಗಳ ಕೋರ್ಸುಗಳ ಬದಲು 04 ವರ್ಷಗಳ ಕೋರ್ಸನ್ನು ಪ್ರಾರಂಭಿಸಬಹುದಾಗಿದೆಯೆಂದು ತಿಳಿಸಿದರು.

ಡಾ. ಟಿ.ವಿ. ರಾಜು ಅವರು ಮಾತನಾಡಿ 05 ವರ್ಷಗಳ ಇಂಟಿಗ್ರೇಟೆಡ್ ಬಿ.ಎಸ್ಸಿ ಮತ್ತು ಎಂ.ಎಸ್ಸಿ ಭೂಗೋಳಶಾಸ್ತ್ರ ಕೋರ್ಸು ಪ್ರಾರಂಭಿಸುವುದು ಒಂದು ಹೊಸ ಪ್ರಯೋಗವಾಗಿದೆ. ಆದ್ದರಿಂದ ಸದರಿ ಕೋರ್ಸನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲು ಅನುಮತಿಸಬಹುದಾಗಿದೆ ಎಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ 05 ವರ್ಷಗಳ ಇಂಟಿಗ್ರೇಟೆಡ್ ಬಿ.ಎಸ್ಸಿ ಮತ್ತು ಎಂ.ಎಸ್ಸಿ ಭೂಗೋಳಶಾಸ್ತ್ರ ಕೋರ್ಸನ್ನು 2022-23ನೇ ಸಾಲಿನಿಂದ ಭೂಗೋಳಶಾಸ್ತ್ರ ವಿಭಾಗದಲ್ಲಿ ಪ್ರಾರಂಭಿಸಲು ಹಾಗೂ ಸದರಿ ಕೋರ್ಸಿಗೆ ಭೂಗೋಳಶಾಸ್ತ್ರ ವಿಭಾಗದ ಅಧ್ಯಕ್ಷರು ಸಲ್ಲಿಸಿರುವಂತೆ ಕೋರ್ಸಿನ ಶುಲ್ಕವನ್ನು ನಿಗಧಿಪಡಿಸಲು ಅನುಮೋದಿಸಿ,

Lyvethie Hungs

ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಮೇಲ್ಕಂಡ ಕೋರ್ಸನ್ನು ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ಸೂಚಿಸಿತು.



**ವಿಷಯ ಸಂಖ್ಯೆ 08:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 2022-23ನೇ ಶೈಕ್ಷಣಿಕ ಸಾಲಿನಿಂದ ನೂತನವಾಗಿ ಪ್ರಾರಂಭವಾಗಲಿರುವ ಬಿ.ಕಾಂ ಮತ್ತು ಬಿ.ಬಿ.ಎಂ ಹಾನರ್ಸ್ ಕೋರ್ಸುಗಳಿಗೆ ಶುಲ್ಕ ನಿಗಧಿಪಡಿಸುವ ಕುರಿತು ಹಾಗೂ ಬಿ.ಎ ಮತ್ತು ಬಿ.ಎಸ್ಸಿ ಹಾನರ್ಸ್ ಕೋರ್ಸುಗಳಿಗೆ ನಿಗಧಿಪಡಿಸಲಾಗಿದ್ದ ಸದರಿ ಶುಲ್ಕಕ್ಕೆ ಪ್ರಸ್ತುತ ಸಾಲಿಗೆ ಶೇಕಡಾ 10 ರಷ್ಟು ಹೆಚ್ಚಿಸಿ ನಿಗಧಿಪಡಿಸುವ ಕುರಿತು.

*ನಿರ್ಣಯ:*

ದೀರ್ಘ ಚರ್ಚೆಯ ನಂತರ 04 ವರ್ಷಗಳ ಇಂಟಿಗ್ರೇಟೆಡ್ ಬಿ.ಕಾಂ ಮತ್ತು ಬಿ.ಬಿ.ಎಂ ಹಾನರ್ಸ್ ಕೋರ್ಸನ್ನು 2022-23ನೇ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದಲ್ಲಿ ಪ್ರಾರಂಭಿಸಲು ಹಾಗೂ ಸದರಿ ಕೋರ್ಸುಗಳಿಗೆ ಪರಾಮರ್ಶಿತ ಟಿಪ್ಪಣಿಯಲ್ಲಿರುವಂತೆ ಕೋರ್ಸಿನ ಶುಲ್ಕವನ್ನು ನಿಗಧಿಪಡಿಸಲು ಅನುಮೋದಿಸಿ, ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಮೇಲ್ಕಂಡ ಕೋರ್ಸುಗಳನ್ನು ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ಸೂಚಿಸಿತು.

ಮುಂದುವರೆದು ಬಿ.ಎ ಮತ್ತು ಬಿ.ಎಸ್ಸಿ ಹಾನರ್ಸ್ ಕೋರ್ಸುಗಳಿಗೆ 2021-22ನೇ ಸಾಲಿನಲ್ಲಿ ನಿಗದಿಪಡಿಸಲಾದ ಶುಲ್ಕವನ್ನು ಶೇ 10% ರಷ್ಟು ಹೆಚ್ಚಿಸಿ 2022-23ನೇ ಸಾಲಿಗೆ ಪರಿಷ್ಕೃತ ಶುಲ್ಕವನ್ನು ನಿಗದಿಪಡಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the Special meeting of the Syndicate held on 11.07.2022*

**Item No. 09:** Appointment to various Administrative Positions in Bangalore University.

***Resolution:***

After detailed discussions, the Syndicate resolved to appoint the following Faculty members as Director/Co-ordinator/Special Officer to the following positions on incharge basis until further orders, in addition to their teaching works.

| Sl. No | Administrative positions (In-Charge Basis) | Name of the Faculty members |
|---|---|---|
| 01 | Director, College Development Council | Prof. C. Nagabhushana<br>Centre for Kannada Studies |
| 02 | Director, Prasaranga and Printing press | Prof. C.B. Honnu Siddartha<br>Centre for Kannada Studies |

| | | |
|---|---|---|
| 03 | Director of Students Welfare | Prof. B. Gangadhara, Centre for Kananda Studies |
| 04 | Director, PMEB | Prof. Ashok D. Hanjagi, Dept. of Geography |
| 05 | Dr. B.R. Ambedkar Study and Research Centre | Prof. B.L Muralidhara, MCA Programme |
| 06 | Director, HRDC | Prof. C. Srinivas to continue |
| 07 | Director, DCC | Decision deferred |
| 08 | Director, IQAC | Prof. Parameshwar V. Pandit to continue |
| 09 | Director, Pre-Examination Coaching Centre | Prof. Narasimhamurthy M to continue |
| 10 | IT Centre Incharge | Prof. Hanumanthappa.M MCA Programme |
| 11 | Director, International Centre | |
| 12 | Co-ordinator, Yoga Centre | Prof. S.N. Susheela, Dept. Performing Arts. |
| 13 | Co-ordinator, Bio-park | Dr. S.T. Girisha, Dept. of Micro Biology & Bio-technology- to continue |
| 14 | Director, Gandhian Studies | Prof. H.L. Nataraj, Centre for Kannada Studies – to continue |
| 15 | Director, Sri Basavalingappa Study Centre (Chair) | Prof. T.H. Murthy, Centre for Rural Development – to continue |
| 16 | Director, Sri Jagajivan Ram Study Centre (Chair) | Prof. B. Gangadhar- Centre for Kannada Studies – to continue |
| 17 | Special Officer, Backward Class cell. | Prof. D.K. Chittaiah Pujar, Centre for Kannada Studies |
| 18 | Special Officer SC/ST Cell | Dr. Siddappa, Dept. of Women Studies |
| 19 | Director, Ramanagara PG Centre | Prof. K. Ramakrishnaiah, Dept of Performing Arts – to continue |
| 20 | Director, Centre for Skill Development | Prof. Cynthia Menezes, Chairperson, Dept.of Management Studies, |
| 21 | University Librarian | Prof. K.G Jayarama Naik to be appointed as in-charge University Librarian until further orders. |

**GENERAL DISCUSSIONS:**

1. ಡಾ. ಎಚ್. ಸುಧಾಕರ್ ರವರು ಮಾತನಾಡಿ ಶಿಕ್ಷಣ ವಿಭಾಗದಲ್ಲಿ ಡಾ. ಹೆಚ್.ಆರ್. ಜಯಮ್ಮ ಹಾಗೂ ಡಾ.ಉಮ್ಮೆಕುಲ್ಸುಮ್ ಅವರ ಸೇವೆಯನ್ನು ಮಾನ್ಯ ಉಚ್ಛ ನ್ಯಾಯಾಲಯದ ಅನುಸಾರ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಮುಂದುವರೆಸಿದ್ದರೂ ಸಹ ಅವರಿಗೆ ಮೂರು ತಿಂಗಳ ವೇತನವನ್ನು ನೀಡಿರುವುದಿಲ್ಲ. ಸದರಿ

ವಿಭಾಗದ ಮುಖ್ಯಸ್ಥರು ಅವರ ಹಾಜರಾತಿಯನ್ನು ಸಹಿ ಮಾಡಿಕೊಟ್ಟಿರುವುದಿಲ್ಲವೆಂದು ತಿಳಿಸಿ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ನಿರ್ಣಯ:

ಚರ್ಚೆಯ ನಂತರ ಈ ಕುರಿತು ವಿಚಾರಣೆ ನಡೆಸಿ ವರದಿ ಸಲ್ಲಿಸಲು ಡಾ. ಎಚ್. ಸುಧಾಕರ್ ರವರ ನೇತೃತ್ವದಲ್ಲಿ ಒಂದು ಸದಸ್ಯರ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

2. ಶ್ರೀ ಪ್ರೇಮ್ ಸೋಹನ್‌ಲಾಲ್ ರವರು ಮಾತನಾಡಿ ಡಾ. ಪರಮೇಶ್ವರ್ ವಿ. ಪಂಡಿತ್ ಅವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ವೃತ್ತಿಪರ ಪ್ರಗತಿ ಯೋಜನೆಯಡಿಯಲ್ಲಿ (C.A.S) ಪ್ರಾಧ್ಯಾಪಕರ ಹುದ್ದೆಗೆ ಪೂರ್ವ ದಿನಾಂಕದಿಂದ ಮುಂಬಡ್ತಿ ನೀಡಬೇಕೆಂದು ನ್ಯಾಯಾಲಯದ ಆದೇಶವನ್ನು ಪಡೆದಿದ್ದಾರೆ. ಈ ಬಗ್ಗೆ ಅವರ ಅರ್ಜಿಯನ್ನು ಪರಿಶೀಲನಾ ಸಮಿತಿಯು (Scrutiny Committee) ಪರಿಶೀಲಿಸಿ ವರದಿ ಸಲ್ಲಿಸಿದ ನಂತರ ಆಯ್ಕೆ ಸಮಿತಿಯು (Selection Committee) ಡಾ. ಪರಮೇಶ್ವರ ವಿ. ಪಂಡಿತ್ ರವರ ಸಂದರ್ಶನ ನಡೆಸಿ ನಡಾವಳಿಗಳನ್ನು ಸಿದ್ಧಪಡಿಸಿ ನೀಡಿದೆ. ಆದಕಾರಣ ಸದರಿ ನಡಾವಳಿಗಳನ್ನು ಪರಿಗಣಿಸಿ ಅವರಿಗೆ ಪೂರ್ವ ದಿನಾಂಕದಿಂದ ಮುಂಬಡ್ತಿ ನೀಡುವ ಬಗ್ಗೆ ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳಬೇಕೆಂದು ಕೋರಿದರು.

ಡಾ. ಹೆಚ್. ಸುಧಾಕರ್ ರವರು ಮಾತನಾಡಿ ಡಾ. ಪರಮೇಶ್ವರ ವಿ. ಪಂಡಿತ್ ಅವರ ಕೇಸು ಇನ್ನು ಹಲವಾರು ಪ್ರಾಧ್ಯಾಪಕರುಗಳಿಗೆ ಅನ್ವಯಿಸುತ್ತದೆ. ಆದ್ದರಿಂದ ಇನ್ನಿತರ ಪ್ರಾಧ್ಯಾಪಕರುಗಳ ಮನವಿಯನ್ನು ಸಹ ಪರಿಗಣಿಸಬೇಕೆಂದು ತಿಳಿಸಿದರು. ಡಾ. ಗೋವಿಂದರಾಜು ರವರು ಮಾತನಾಡಿ ಯು.ಜಿ.ಸಿ ನಿಯಮಾವಳಿಯಂತೆ ಡಾ. ಪರಮೇಶ್ವರ್ ವಿ. ಪಂಡಿತ್ ರವರು ದಿನಾಂಕ 01.01.2006 ಕ್ಕೆ ಸಹ ಪ್ರಾಧ್ಯಾಪಕರು ಆಗಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಬೇಕು. ಅವರು ವಿಶ್ವವಿದ್ಯಾಲಯಕ್ಕೆ ಸಹ ಪ್ರಾಧ್ಯಾಪಕರಾಗಿ ಸೇವೆಗೆ ಸೇರಿದ ದಿನಾಂಕದಿಂದ 03 ವರ್ಷಗಳ ನಂತರ ಪ್ರಾಧ್ಯಾಪಕರ ಹುದ್ದೆಗೆ ಅರ್ಹರಾಗುತ್ತಾರೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಬೇಕೆಂದು ಕೋರಿದರು.

ನಿರ್ಣಯ:

ದೀರ್ಘ ಚರ್ಚೆಯ ನಂತರ ಸದರಿ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

Cynthia Menzes

3. ಶ್ರೀ ಕುಮಾರ. ಟಿ ಅವರು ಮಾತನಾಡಿ ಶುಶೃತಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜಿನಲ್ಲಿ ಎಂ.ಬಿ.ಎ ಕೋರ್ಸಿನ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ 03 ವಿದ್ಯಾರ್ಥಿಗಳಿಗೆ ಅವರ ಸ್ನಾತಕ ಕೋರ್ಸಿನ ಅಂಕಪಟ್ಟಿಯನ್ನು ಸಂಬಂಧಿಸಿದ ವಿಶ್ವವಿದ್ಯಾಲಯವು ತಡವಾಗಿ ನೀಡಿರುವ ಕಾರಣ ಅವರುಗಳು ಮೂಲ ಅಂಕಪಟ್ಟಿಯನ್ನು ಪ್ರವೇಶಾತಿ ಅನುಮೋದನೆಗೋಸ್ಕರ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ವಿಳಂಭವಾಗಿದೆ. ಅವರ ಪ್ರವೇಶಾತಿ ಇನ್ನು ಅನುಮೋದನೆ ಆಗಿರುವುದಿಲ್ಲ. ಆದಕಾರಣ ಅವರುಗಳು ಈಗಾಗಲೇ ಪ್ರಾರಂಭವಾಗಿರುವ ಪ್ರಥಮ ಸೆಮಿಸ್ಟರ್‌ನ ಮೊದಲ ಎರಡು ವಿಷಯಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದರೆ ಸದರಿ ವಿದ್ಯಾರ್ಥಿಗಳು ಪ್ರಸ್ತುತ ಅವರ ಮೂಲ ಅಂಕಪಟ್ಟಿಗಳನ್ನು ಸಲ್ಲಿಸಿರುವುದರಿಂದ ಅವರುಗಳ ಎಂ.ಬಿ.ಎ ಪ್ರವೇಶಾತಿಯನ್ನು ಅನುಮೋದಿಸಿದರೆ ಉಳಿದ ವಿಷಯಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುತ್ತದೆ ಎಂದು ತಿಳಿಸಿ ಅವರ ಪ್ರವೇಶಾತಿಯನ್ನು ಅನುಮೋದಿಸಬೇಕೆಂದು ತಿಳಿಸಿದರು.

ಕುಲಸಚಿವರು ಉತ್ತರಿಸಿ ಪರೀಕ್ಷೆಗಳು ಪ್ರಾರಂಭವಾದ ನಂತರ ಪ್ರವೇಶಾತಿ ಅನುಮೋದಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದಕಾರಣ ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

4. ಗುತ್ತಿಗೆ ಆಧಾರದ ಮೇಲೆ ಅಸಿಸ್ಟೆಂಟ್ ಇಂಜಿನಿಯರ್ಸ್ ಹಾಗೂ ಚಾಲಕರನ್ನು ನೇಮಿಸಿಕೊಳ್ಳುವ ಕುರಿತು ರಚಿಸಿರುವ ಸಮಿತಿಗೆ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

5. ಶ್ರೀ ಪ್ರೇಮ್ ಸೋಹನ್‌ಲಾಲ್ ಹಾಗೂ ಡಾ. ಧನಂಜಯ ಬಿ. ಆರ್., ಅವರುಗಳು ಮಾತನಾಡಿ ಸಿಂಡಿಕೇಟ್ ಸದಸ್ಯರಿಗೆ ಆಸನ ಭತ್ಯೆಯನ್ನು ಹೆಚ್ಚಿಸಬೇಕೆಂದು ತಿಳಿಸಿ ಮೈಸೂರು ವಿಶ್ವವಿದ್ಯಾಲಯವು ಸಿಂಡಿಕೇಟ್ ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಆಸನ ಭತ್ಯೆಯಾಗಿ ರೂ. 7,000/- ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯವು ಸಿಂಡಿಕೇಟ್ ಸದಸ್ಯರುಗಳಿಗೆ ರೂ. 6,500/- ಅನ್ನು ಆಸನ ಭತ್ಯೆಯಾಗಿ + ರೂ. 500/- ಅನ್ನು ಪ್ರಯಾಣ ಭತ್ಯೆಯಾಗಿ ನಿಗಧಿ ಪಡಿಸಿದೆ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾಲಯವು ಸಿಂಡಿಕೇಟ್ ಸದಸ್ಯರ ಆಸನ ಭತ್ಯೆಯನ್ನು ಹೆಚ್ಚಿಸಬೇಕೆಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಪ್ರಸ್ತುತ ನಿಗದಿ ಪಡಿಸಿರುವ ಆಸನ ಭತ್ಯೆಯನ್ನು ರೂ. 4,000/- ದಿಂದ 6,500/- ಕ್ಕೆ ಹೆಚ್ಚಿಸಲು ಹಾಗೂ ಪ್ರಯಾಣ ಭತ್ಯೆಯನ್ನು ರೂ. 500/- ಕ್ಕೆ ನಿಗಧಿ ಪಡಿಸಲು ಸಿಂಡಿಕೇಟ್ ನಿರ್ಣಯಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

Cynthia Menezes

**ಕುಲಪತಿಗಳು**